SRI B. BASAVALINGAPPA.—Sir, it is not correct to say that the procedure adopted is uniform throughout the State. If it is not so I will just enquire into it,

Ban on growing Zarill Vernar Cotton in Afzalpur Taluk

478 SRI M. Y. PATIL (Afzalpur)—Will the Minister for Agriculture and Parliamentary Affairs be pleased to state :—

(a) the reasons why the Government banned growing Zarilla Vernar and other qualities of cotton seeds in Afzalpur Taluk ?

(b) whether the Governmet has ever assessed the people's interest in growing these crops ;

(c) whether the Government intended to reeonsider its decision and lift the ban ?

SRI K. H. RANGANATH (Minister for Agriculture and Parliamentary Affairs) :—

(a) Gulbarga District is excluded from growing Vernar cotton under the provisions of the Cotton Control Act, 1964 for the reason that according to trials earlier conducted this variety was found suitable only for the Northern parts of Bijapur district.

(b) Yes.

(c) Further trials of various other cotton varieties in different agro-climatic zones have since been taken up and their results are under evaluation. The question of permitting cultivation of Vernar cotton in Gulbarga and other districts is under consideration and a decision will be taken soon.

ಶ್ರೀ ಎಂ. ವೈ. ಪಾಟೀಲ್ :—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇಲ್ಲಿ ಏನು ಉತ್ತರ ಕೊಟ್ಟಿದ್ದಾರೆ, ಅದೇ ಉತ್ತರವನ್ನು ಸಂಬಂಧಪಟ್ಟ ಅಧಿಕಾರಿಗಳು ಸಹ ನನಗೆ ಕೊಟ್ಟಿದ್ದಾರೆ. ಆದರೆ ಮಾನ್ಯ ಮಂತ್ರಿಯವರು ತೆರೆದ ಹೃದಯದಿಂದ ಒಕ್ಕಲಿಗರ ಸಲುವಾಗಿ ಒಂದು ಧೋರಣೆಯನ್ನು ಇಟ್ಟುಕೊಳ್ಳಬೇಕು. ವಿಜಾಪುರ ಜಿಲ್ಲೆಯ ಉತ್ತರ ಭಾಗಗಳಲ್ಲಿ ವಿರನಾರ್ ಹತ್ತಿಯನ್ನು ಬೆಳೆಸಲು ಅವಕಾಶ ಕೊಡಲಾಗಿದೆ. ಇಲ್ಲಿರುವಂತಹ ವಾತಾವರಣವೇ ನಮ್ಮ ಅಫಜಲ್‌ಪುರ ಹಾಗು ಜೇವರ್ಗಿಯಲ್ಲಿ ಇದ್ದರೂ ಸಹ ಈ ಜರಿಲ್ಲಾ ಹಾಗು ವೆರಿನಾರ್ ಹತ್ತಿ ಬೆಳೆಯುವುದನ್ನು ನಿಷೇಧ ಮಾಡಲು ಕಾರಣವೇನೆಂದು ಕೇಳುತ್ತೇನೆ?

†ಶ್ರೀ ಕೆ. ಹೆಚ್. ರಂಗನಾಥ್:—ಸಾಮ್ಹಿ ಅಲ್ಲಿ ಬೆಳೆ ಏನು ಬೆಳೆಯುತ್ತಾರೆ ಅದನ್ನು ನೋಡಿ ನಿಷ್ಕರ್ಷೆ ಮಾಡಿದೆ.

ಶ್ರೀ ಎಂ. ವೈ ಪಾಟೀಲ್ :—ಈಗ ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಯಾವ ಹವಾಗುಣ ಕಂಡೀಷನ್ ಇದೆಯೋ ಮತ್ತು ಸಾಯಿಲ್ ಗುಣ ಇದೆಯೋ ಅದೇ ರೀತಿಯ ಹವಾಗುಣ ಮತ್ತು ಮಣ್ಣಿನ ಗುಣ ಒಂದೇ ರೀತಿ ಇದೆ. ಆದುದರಿಂದ ಅಫ್ಜಲಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಜರಿಲ್ಲಾ ವೆರಿನಾರ್ ಹತ್ತಿ ಬೇಸಿಗೆ ಬೆಳೆ ಬೆಳೆಯುವುದಕ್ಕೆ ಅನುಕೂಲ ಇದೆ ಆದ್ದರಿಂದ ಸರ್ಕಾರದವರು ಅದಕ್ಕೆ ಅನುಮತಿ ಕೊಟ್ಟರೆ ಅದರಿಂದ ರೈತರಿಗೆ ಲಾಭವಾಗುತ್ತದೆ. ಈ ಕಾರಣ ಆ ಬೆಳೆ ಬೆಳೆಯುವುದಕ್ಕೆ ಏನು ಈ ಪ್ರದೇಶಗಳಲ್ಲಿ ತಾವು ನಿಷೇಧ ಹಾಕಿದ್ದೀರಿ ಅದನ್ನು ತೆಗೆಯುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್ :—ಸ್ವಾಮಿ ಅಫಜಲಪುರದಲ್ಲಿ ಕೇವಲ ೧೦೦ ಹೆಕ್ಟೇರುಗಳಲ್ಲಿ ಈ ಬೆಳೆ ಇದೆ. ಜೇವರ್ಗಿಯಲ್ಲಿ ೧೦೦ ಹೆಕ್ಟೇರಿನಲ್ಲಿ ಈ ಬೆಳೆ ಇದೆ. ಶಹಪುರದಲ್ಲಿ ೨೦೦ ಹೆಕ್ಟೇರಿನಲ್ಲಿದೆ. ಆಲಂದ ನಲ್ಲಿ ೨೦ ಎಕರೆಯಲ್ಲಿ ಈ ಬೆಳೆ ಇದೆ. ಈಗ ನಾವು ಪುನಃ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಹೆಚ್ಚು ಪ್ರದೇಶದಲ್ಲಿ ಈ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆಂದು ಕಂಡುಬಂದರೆ ಅದನ್ನು ಸರ್ಕಾರ ಪುನರ್ವಿಮರ್ಶೆ ಮಾಡುತ್ತದೆ.

ಶ್ರೀ ಜಿ. ಮಾದೇಗೌಡ :—ವ್ಯವಸಾಯ ಇಲಾಖೆಯಿಂದ ಇಡೀ ರಾಜ್ಯದಲ್ಲಿ ಯಾವ ಯಾವ ಭಾಗ ದಲ್ಲಿ ಏನೇನು ಬೆಳೆ ಬೆಳೆಯಬಹುದು ಎನ್ನತಕ್ಕದ್ದನ್ನು ಸರ್ವೆ ಮಾಡಿರತಕ್ಕದ್ದು ಇದೆಯೇ ? ಇಲ್ಲ ದಿದ್ದರೆ ಯಾವ ಯಾವ ಪ್ರದೇಶದಲ್ಲಿ ಏನೇನು ಬೆಳೆ ಬೆಳೆದರೆ ರೈತರಿಗೆ ಉತ್ತಮ ಫಸಲು ಸಿಕ್ಕುತ್ತದೆಂಬು ದನ್ನು ಸರ್ವೆ ಮಾಡಿದ ರಿಪೋರ್ಟು ನಿಮ್ಮ ಹತ್ತಿರ ಇದೆಯೇ ? ಅದನ್ನು ಕಾರ್ಯಗತಮಾಡುವು ದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರ ? ರೈತ ಸ್ವೇಚ್ಛೆಯಾಗಿ ತನಗೆ ಇಷ್ಟಬಂದಹಾಗೆ, ನೀರು ಇರಲಿ ಅಥವಾ ಇಲ್ಲದಿರಲಿ ಬೆಳೆಯನ್ನು ಬೆಳೆಯುವುದಕ್ಕೆ ತಕ್ಕ ಹಾಗಾಮಾನ ಇರಲಿ ಅಥವಾ ಇಲ್ಲದಿರಲಿ ರೈತ ಬೆಳೆ ಬೆಳೆದು ಅವನ ನಿರೀಕ್ಷೆಗೆ ತಕ್ಕ ಬೆಳೆ ಬಾರದೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇಡೀ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಯಾವ್ಯಾವ ಬೆಳೆ ಮಾಡಿದರೆ ರೈತರಿಗೆ ಉತ್ತಮ ಬೆಳೆ ಬರುತ್ತದೆ ಎಂಬುದನ್ನು ಸರ್ವೆ ಮಾಡತಕ್ಕ ಕಾರ್ಯಕ್ರಮವನ್ನು ಕೈಗೊಂಡು ಅದನ್ನು ಕಾರ್ಯ ಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್ :—ಇಲ್ಲಿ ಪ್ರಶ್ನೆ ಇರತಕ್ಕದು ಜರಿಲ್ಲಾ ವೆರಿನಾರ್ ಹತ್ತಿ ಬೆಳೆಗೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಒಂದು ನೀತಿಯ ಪ್ರಶ್ನೆ ಕೇಳುತ್ತಿದ್ದಾರೆ. ಸರ್ಕಾರದವರು ಈ ವಿಚಾರವನ್ನು ಈಗಾಗಲೇ ಯೋಚನೆ ಮಾಡಿದ್ದಾರೆ. ಏತಕ್ಕೆಂದರೆ ನಮ್ಮಲ್ಲಿ ಬರೀ ಭತ್ತ ರಾಗಿ ಇಂಥ ದ್ದನ್ನೇ ಬೆಳೆಯತಕ್ಕದ್ದು ಒಂದು ಪರಿಪಾಠವಾಗಿದೆ. ಹತ್ತಿ ಬೆಳೆಯಬೇಕು, ದ್ವಿದಳ ಧಾನ್ಯ ಬೆಳೆಯ ಬೇಕು ಎಣ್ಣೆಕಾಳು ಬೆಳೆಯ ಬೇಕು ಹೀಗೆಲ್ಲಾ ಇರುವುದರಿಂದ ನಾವು ಎಲ್ಲೆಲ್ಲಿ ಯಾವ ಯಾವ ಬೆಳೆ ಬೆಳೆದು ಅಭಿವೃದ್ಧಿ ಮಾಡಬೇಕು ಎಂಬುದನ್ನು ಶಾಸ್ತ್ರೀಯವಾಗಿ ಅಭಿವೃದ್ಧಿ ಮಾಡಬೇಕೆಂಬು ದನ್ನು ಯೋಚನೆ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಹತ್ತು ವರ್ಷಗಳ ಒಂದು ವಿಶೇಷ ಯೋಜನೆಯನ್ನು ತಯಾರು ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

Villages Electrified in Raichur Taluka

581 SRI Sudhendra Rao Kasbe (Kalmala)— Will the Chief Ministerbe pleased to state :—

(a) the number of villages electrified in Raichur Taluk so far ;

(b) the number and names of the villages included in this year's (Programme for electrification ;)

(c) whether the progress of Rural Electrification in Raichur District has been greatly hampered due to the critical short supply of equipment and materials ;

(d) if so what steps the Governmet has taken or proposed to take to ensure adequate supply of machinery and materials for speedy rural electrification as per programme.

SRI K. H. SRINIVAS (Minister of State for Information and Youth Services) on behalf of SRI D. DEVARAJ URS (Chief Minister)